ನನ್ನ ಅದ್ಭುತ ಶಾಲೆ

ಮೂಲ **ಡಾ:ಅಭಯ್ ಬಾಂಗ್**

ಆಂಗ್ಲ ಅನುವಾದ: **ಅರವಿಂದ ಗುಪ್ತಾ**

ಕನ್ನಡಕ್ಕೆ: **ಪ್ರಸಾದ್ ಎಸ್.ಬಿ.**

ಮಗುವಾಗಿದ್ದಾಗ ನಾನೊಂದು ಅದ್ಭುತ ಶಾಲೆಗೆ ಸೇರಿದ್ದೆ. ಇಂದು ನಾನು ಬಹಳ ಅಸಹಾಯಕ, ದುಃಖಿತ, ಏಕೆಂದರೆ ನನ್ನ ಮಗ ಆನಂದನಿಗೆ ಆ ರೀತಿಯ ಶಿಕ್ಷಣ ಕೊಡುವ ಶಾಲೆಯನ್ನು ನಾನೀಗ ಕೊಡಲಾರೆ. ''ನಮ್ಮ ಬಾಲ್ಯ ಬಹಳ ವಿಭಿನ್ನವಾಗಿತ್ತು. ಈಗ ಎಲ್ಲವೂ ಗುರುತೇ ಸಿಗದಷ್ಟು ಬದಲಾಗಿದೆ . ಏನು ಮಾಡುವುದು? ಹಳಬರು ಯಾವಾಗಲೂ ತಾವು ಕಳೆದ ಕಾಲದ ಬಗೆಗೆ ಭಾರವಾದ ಹೃದಯದಿಂದ ಹಲಬುತ್ತಿರುತ್ತಾರೆ. ನೀವು ಕೇಳಬಹುದು ಆ ಶಾಲೆಯಲ್ಲಿ ಅಂಥಾ ವಿಶೇಷವೇನಿತ್ತು? ಎಂದು.

ಒಂಭತ್ತನೇ ತರಗತಿಯವರೆಗೂ ನಾನು 'ನಯಿ ತಾಲೀಮ್ (ಹೊಸ ಕಲಿಕಾ ವಿಧಾನ)ದಲ್ಲಿ ಅಭ್ಯಾಸ ಮಾಡಿದೆ. ಗಾಂಧೀಯವರೇ ಸ್ವತಃ ಇದನ್ನು ರೂಪಿಸಿದ್ದರು. ಈ ಅವಧಿಯಲ್ಲಿನ ನಾಲ್ಕು ವರ್ಷಗಳು ನಾನು ವಾರ್ಧಾದಲ್ಲಿನ 'ಸೇವಾ ಆಶ್ರಮ ದಲ್ಲಿ ಇದ್ದೆ. ಶಿಕ್ಷಣವೆಂದರೆ ಪ್ರಕೃತಿಮಾತೆಯಿಂದ ದೂರ... ನಾಲ್ಕು ಗೋಡೆಗಳೊಳಗಿನ ತರಗತಿಯಲ್ಲಿ ಆಸಕ್ತಿ ಕೆರಳಿಸದ ಪಾಠಗಳನ್ನು ಉರು ಹಚ್ಚುವುದಲ್ಲ. ಮಕ್ಕಳು ಪ್ರಕೃತಿಯ ಮಡಿಲಲ್ಲಿ ಸಮಾಜೋದ್ಧಾರದ ಕೆಲಸ ಕಾರ್ಯಗಳನ್ನು ಮಾಡುತ್ತಲೇ ತಮ್ಮ ಶಾಲಾಪಾಠಗಳನ್ನು ಚೆನ್ನಾಗಿಯೇ ಕಲಿಯುತ್ತಾರೆ ಎಂದು ಗಾಂಧೀಜಿ ಬಲವಾಗಿ ನಂಬಿದ್ದರು. ಮಕ್ಕಳು ಮನೋಬುದ್ಧಿ ವಿಕಸನವನ್ನು ಜೀವನಾವಶ್ಯಕ ಕುಶಲಕಲೆಗಳನ್ನು ರೂಢಿಸಿಕೊಳ್ಳುವುದು ಕೂಡ ಹೀಗೆಯೇ ಆಗಿದೆ. ಈ ಇಂಥಾ ಕಲಿಕಾ ವಿಧಾನವನ್ನು ಪರಿಣಾಮಕಾರಿಯಾಗಿಸಲು ಗಾಂಧೀಜಿಯವರ ಒತ್ತಾಸೆಯ ಮೇರೆಗೆ ರವೀಂದ್ರನಾಥ ಟಾಗೂರರು ಇಬ್ಬರು ಸಮರ್ಥ ಶಿಕ್ಷಕರನ್ನು ಸೇವಾಗ್ರಾಮಕ್ಕೆ ಕಳುಹಿಸಿದ್ದರು ದೂರದ ಶ್ರೀಲಂಕದಿಂದ ಶ್ರೀ ಆರ್ಯಂಕಂ ಮತ್ತು ಬಂಗಾಳದ ಶ್ರೀಮತಿ ಆಶಾದೇವಿ. ಈ ಇಬ್ಬರು ಗಾಂಧೀಯವರ ಈ ಕಲಿಕಾ ವಿಧಾನಕ್ಕೆ ಟಾಗೂರರ ಪ್ರಕೃತಿ ಪ್ರೇಮ ಮತ್ತು ಕಲಾರಸಿಕತೆಯ ಮೆರುಗನ್ನು ಕೊಟ್ಟರು. ಈ ಹೊಸ ಕಲಿಕಾ ಪ್ರಯೋಗದ ಶುರುವಿನಿಂದಲೇ ನನ್ನ ತಂದೆ-ತಾಯಿಗಳಿಬ್ಬರೂ ಇದರಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ನಮ್ಮೀಶಾಲೆಯು ಶಿಕ್ಷಣ ನೀಡುವ ನೂತನ ರೀತಿ-ನೀತಿಗಳನ್ನು ಶೋಧಿಸುತ್ತಿತ್ತು. ಇಲ್ಲಿ ನಾನು ಕೆಲವನ್ನು ನೆನಪಿಸಿಕೊಳ್ಳಲು ಯತ್ನಿಸಿದ್ದೇನೆ.

ಪ್ರಾಣಿ ಪ್ರಪಂಚದ ಪರಿಚಯ

ಇತ್ತೀಚಿನ ದಿನಗಳಲ್ಲಿ ಕಾಡು ಮತ್ತು ಅಲ್ಲಿನ ಪ್ರಾಣಿಗಳ ಸಂರಕ್ಷಣೆ ಬಹು ಚರ್ಚಿತ ವಿಷಯವಾಗಿದೆ. ಆದರೆ ೨೭ ವರ್ಷಗಳ ಹಿಂದೆ ಇದೇನು ಅಂತಹ ಮಹತ್ವದ ಸಂಗತಿ ಎನಿಸಿರಲಿಲ್ಲ. ನಮ್ಮ ಮರಾಠಿ ಶಿಕ್ಷಕರಾದ ಶ್ರೀಪಾಟೀಲರು ಹಲಸಿನ ಮರದ ಕೊಂಬೆಗಳ ಮೇಲೆ ನಮ್ಮನ್ನೆಲ್ಲಾ ಕೂರಿಸಿ ಪಾಠ ಮಾಡುತ್ತಿದ್ದರು. ನಮ್ಮ ಮನತಣಿಯೆ ಕಾಡಿನ ಕಥೆಗಳನ್ನು, ತಮ್ಮ ಶಿಕಾರಿಯ ಅನುಭವವನ್ನು ಹೇಳುತ್ತಿದ್ದರು.

ಒಮ್ಮೆ ಅವರು ತಪ್ಪಿ ಒಂದು ಗರ್ಭಿಣಿ ಜಿಂಕೆಯನ್ನು ಬೇಟೆ ಆಡಿದರಂತೆ, ಅದರ ಕಣ್ಣುಗಳಲ್ಲಿ ಮಡುಗಟ್ಟಿದ್ದ ನೋವು ದುಃಖಗಳನ್ನು ನೋಡಲಾರದೆ ವಿಲವಿಲ ಒದ್ದಾಡಿ ಹೋದರಂತೆ. ಮತ್ತೆಂದೂ ಅವರು ಬಂದೂಕವನ್ನು

ಮುಟ್ಟಲಿಲ್ಲವಾದರೂ ಪ್ರಾಣಿಗಳನ್ನು 'ಶೂಟ್ ಮಾಡುವುದನ್ನು ನಿಲ್ಲಿಸಲಿಲ್ಲ. ಬಂದೂಕಿನಿಂದಲ್ಲ, 'ಕ್ಯಾಮೆರಾ ದಿಂದ 'ಶೂಟ್ ಮಾಡತೊಡಗಿದರು. ವನ್ಯ ಜೀವಿಗಳ ಛಾಯಾಗ್ರಹಣ ಅವರಿಗೆ ಹುಚ್ಚು ಹಿಡಿಸಿತ್ತು. ಒಂದೇ ಒಂದು ಒಳ್ಳೆಯ ಛಾಯಾಚಿತ್ರಕ್ಕಾಗಿ ಅವರು ಎಷ್ಟೋ ಬಾರಿ ಇಡೀ ರಾತ್ರಿಯನ್ನು ಮರದ ಮೇಲೆ ಮಾಡಲ್ಪಟ್ಟ ಮಚಾನುಗಳಲ್ಲಿ ಕಳೆದಿದ್ದರು. ಅವರ ಕಥೆಗಳಲ್ಲಿ ಕಾಡು ಕಾಡಿನ ಪ್ರಾಣಿಗಳ ಬಗೆಗಿನ ಕಾಳಜಿ ಮತ್ತು ಪ್ರೀತಿ ಸಹಜವಾಗಿ ತುಂಬಿರುತ್ತಿತ್ತು. ಇವರ ಕಥೆಗಳ ಮಾಯಾಲೋಕದಲ್ಲಿ ನಾವು ಕಾಡೆಲ್ಲ ಅಲೆದು, ಅಪರೂಪದ ದೃಶ್ಯಗಳನ್ನು ಕಂಡೆವು. ಶ್ರೀಪಾಟೀಲರು ಒಬ್ಬ ಶಬ್ದಮಾಂತ್ರಿಕ. ಕಾಡಿನ ಚಿತ್ರಗಳು ಮಾತಿನಲ್ಲೇ ಮೂಡುತ್ತಿದ್ದವು. ಇವೆಲ್ಲ ನನ್ನ ಮೇಲೆ ಗಾಢ ಪ್ರಭಾವ ಬೀರಿ ನಾನು ಅರಣ್ಯ ಮತ್ತು ವನ್ಯಜೀವಿಗಳ ಪ್ರೇಮಿಯಾಗಿ ಹೋದೆ. ಆದರೆ ಈಗಿನ ಮರಾಠಿ ಪಠ್ಯ ಪುಸ್ತಕದಲ್ಲಿ ಕಾಡಿನ ಪ್ರಾಣಿಗಳ ಕುರಿತಾದ ಪಾಠವು ' ಪ್ರಾಣಿಗಳೂ ಸಹ ನಮ್ಮಂತೆಯೇ ಜೀವಿಗಳು ಎಂಬ ನಿಸ್ಸಾರ ಸಾಲಿನಿಂದ ಶುರುವಾಗುತ್ತದೆ. ಇಂತಹ ಸತ್ವಹೀನ ಪಾಠಗಳು ನಮ್ಮ ಮಕ್ಕಳ ಕಲ್ಪನಾಲೋಕಕಕೆ ರಂಗು ತುಂಬುತ್ತವೆಯೇ?ಅವಕ್ಕೆ ಪ್ರೇರೇಪಿಸುವ ಶಕ್ತಿ ಇದೆಯೇ? ಇಂದಿಗೂ ಮಹಾರಾಷ್ಟ್ರದ ಗಡಚಿರೋಲಿ ಜಿಲ್ಲೆಯಲ್ಲಿ ದಟ್ಟ ಕಾಡಿದೆ. ಆದರೆ ಆ ಕಾಡಿನ ಮಕ್ಕಳು ಓದುವ ಶಾಲೆಯ ಚಟುವಟಿಕೆಗಳು ಯಾವುದೂ ಕಾಡಿನ ಮತ್ತು ಕಾಡು ಪ್ರಾಣಿಗಳ ಬಗೆಗೆ ವ್ಯಾಮೋಹ ಮೂಡಿಸುವ ಹಾಗಿಲ್ಲ, ನಡುವಿನ ತಂತು ಕಡಿದಿದೆ.

ಸಾಧು-ಸಂತರ ಹಬ್ಬಗಳು

ಕಹಿಮಾತ್ರೆಗಳನ್ನು ನುಂಗುವ ಹಾಗೆ ನಾವು ಸಂತ ತುಕಾರಾಂ ಬರೆದ ದ್ವಿಪದಿಗಳನ್ನು ಗುನುಗಬೇಕಿರಲಿಲ್ಲ. ಪ್ರತೀ ಮಳೆಗಾಲದಲ್ಲಿ ನಮ್ಮ ಶಾಲೆಯು ಸಂತರ ಹಬ್ಬವನ್ನು ಆಚರಿಸುತ್ತಿತ್ತು. ನಾವು ಅವರ ಜೀವನ ಚರಿತ್ರೆಯ ಬಹು ಮುಖ್ಯ ಘಟ್ಟಗಳನ್ನು ಮತ್ತು ಪ್ರೇರಣಾತ್ಮಕ ಘಟನೆಗಳನ್ನು ಸಣ್ಣ ಸಣ್ಣ ನಾಟಕಗಳನ್ನಾಗಿಸಿ ಅಭಿನಯಿಸುತ್ತಿದ್ದೆವು. ಪ್ರಬಂಧಗಳನ್ನು ರಚಿಸುತ್ತಿದ್ದೆವು. ಗೋಡೆಗಳ ಮೇಲೂ ಚಿತ್ರಗಳನ್ನು ಬಿಡಿಸುತ್ತಿದ್ದೆವು. ಈ ಎಲ್ಲಾ ಚಟುವಟಿಕೆಗಳಲ್ಲಿ ಕೆಲವೇ ಮಂದಿಯಲ್ಲ. ಶಾಲೆಯ ಎಲ್ಲಾ ಮಕ್ಕಳು ಒಂದಿಲ್ಲೊಂದು ಚಟುವಟಿಕೆಯಲ್ಲಿ ಭಾಗವಹಿಸುತ್ತಿದ್ದರು. ಈ ೧೫ ದಿನಗಳೂ ನಮಗೆ ಉತ್ಸವ. ಇಂತಹದೇ ಉತ್ಸವಕ್ಕಾಗಿ ನಾನು ಸಂತ ತುಕಾರಾಮರ ಒಂದು ದ್ವಿಪದಿಯನ್ನು ಮೂರು ವಿಭಿನ್ನ ರೀತಿಗಳಲ್ಲಿ ಹಾಡುವುದನ್ನು ಕಲಿತೆ. ಈ ಹಬ್ಬದಲ್ಲಿ ಬಹಳಷ್ಟು ಭಜನೆಗಳನ್ನು ಹಾಡುತ್ತಿದ್ದೆವು. ಈ ಸಾಮೂಹಿಕ ಪ್ರಾರ್ಥನೆಗಳಲ್ಲೇ ಮೊಟ್ಟ ಮೊದಲ ಬಾರಿಗೆ ನಾನು 'ಭೈರವಿ ರಾಗವನ್ನು ಹಾಡುವುದು ಕಲಿತೆ. ಈ ಹಬ್ಬದ ವಾತಾವರಣದಲ್ಲಿ ಆಡಾಡುತ್ತಲೇ ನಾವು ಬಹಳಷ್ಟು ಒಳ್ಳೇ ಪಾಠಗಳನ್ನೂ ಕಲಿತೆವು. ನಂತರ ಬೋಧನೆಯ ಸಾರ, ಜೀವನ ಚರಿತ್ರೆ ಮತ್ತು ಆಧ್ಯಾತ್ಮಕತೆಗೆ ಅವರ ಕೊಡುಗೆಯ ಮಹತ್ವಗಳನ್ನು ಅರಿತೆವು. ಇಷ್ಟೆಲ್ಲಾ ವಿಷಯಗಳನ್ನು ನಾವು ಭಾಷೆ, ಸಂಗೀತ, ತತ್ವಜ್ಞಾನಗಳನ್ನಾಗಿ ವಿಭಜಿಸದೆ ಸಮಗ್ರವಾಗಿ ಕಲಿತೆವು. ಇದೇ ಬಹುಮುಖ್ಯ ವ್ಯತ್ಯಾಸ.

ಮುಂದೆ ಬಹಳ ವರ್ಷಗಳ ನಂತರ ನಾನು ಸರ್ಕಾರಿ ಶಾಲೆಗೆ ಭೇಟಿಕೊಟ್ಟಾಗ ಸಂತ ತುಕಾರಾಮರ ಅವೇ ಪದ್ಯಗಳನ್ನು ದಪ್ಪವಾದ, ನೀರಸ ಪಠ್ಯ ಪುಸ್ತಕದಲ್ಲಿ ಕಂಡೆ. ಆ ಮರಾಠಿ ಪುಸ್ತಕದ ಹೆಸರು ' ಕಾವ್ಯ ಕುಸುಮಾಂಜಲಿ . ಇದನ್ನು ನೋಡಿದ್ದರೆ ಸ್ವತಃ ಸಂತ ತುಕಾರಾಮರೂ ವೇದನೆ ಪಡುತ್ತಿದ್ದರೇನೋ.

ನಾನು ಸಸ್ಯ ಶಾಸ್ತ್ರವನ್ನು ಕಲಿತದ್ದು

ಬಹಳಷ್ಟು ಶಾಲೆಗಳಲ್ಲಿ ಸಸ್ಯಶಾಸ್ತ್ರವನ್ನು ಕಲಿಸಲು ಸಚಿತ್ರ ಪಠ್ಯಪುಸ್ತಕ, ವಿವರಗಳಿರುವ ರೇಖಾ ಚಿತ್ರದ ಪಟಗಳು ಅಥವಾ ಗಾಜಿನ ಜಾಡಿಗಳಲ್ಲಿ ಕೆಡದಂತೆ ಇಟ್ಟಿರುವ ಸಸ್ಯಭಾಗಗಳನ್ನು ಬಳಸುತ್ತಾರೆ. ಮಕ್ಕಳು ಗಿಡಮರಗಳ ಸಸ್ಯಶಾಸ್ತ್ರೀಯ ಹೆಸರುಗಳನ್ನು, ಜಾತಿ-ಉಪಜಾತಿಗಳನ್ನು, ಅವುಗಳ ತರತರವಾದ ಸಸ್ಯಭಾಗಗಳನ್ನು (ಎಲೆ, ಕಾಂಡ, ಬೇರುಗಳ ವಿಧ ಇತ್ಯಾದಿ) ತಪ್ಪಿಲ್ಲದೆ ಉಚ್ಚರಿಸಲು ಬಹಳ ಕಷ್ಟ ಪಡುತ್ತಾರೆ. ಎಲ್ಲವನ್ನೂ ಉರುಹಚ್ಚಿ ನೆನಪಿನಲ್ಲಿಡಲು ಯತ್ನಿಸುತ್ತಾರೆ. ಆದರೆ ಪರೀಕ್ಷೆ ಮುಗಿಯುತ್ತಿದ್ದಂತೆಯೇ ಇವೆಲ್ಲಾ ಹೇಳ ಹೆಸರಿಲ್ಲದಂತೆ ನೆನಪಿನಿಂದ ಮಾಸಿಹೋಗುತ್ತವೆ. ನಮ್ಮ ಶಾಲೆಯ ಸುತ್ತಮುತ್ತಲೂ ವೈವಿಧ್ಯಮಯ ಸಸ್ಯರಾಶಿ ತೋಟ, ಹೊಲ, ಗದ್ದೆಗಳಲ್ಲಿ ತುಂಬಿತ್ತು. ಇಲ್ಲಿ ಮುಖ್ಯ ವಿಷಯವೆಂದರೆ ನಮ್ಮ ಶಿಕ್ಷಕರು ನಮ್ಮನ್ನೆಲ್ಲಾ ಆಗಾಗ ಈ ಜಾಗಗಳಿಗೆ ಸಂಚಾರಕ್ಕೆಂದು ಕರೆದೊಯ್ಯುತ್ತಿದ್ದರು. ಹೀಗೆ ಹೊರಹೋದಾಗಲೆಲ್ಲಾ ನಾವು ಪ್ರತೀ ಗಿಡಮರಗಳನ್ನು ಹತ್ತಿರದಿಂದ ಗಮನಿಸುತ್ತಿದ್ದೆವು. ಯಾವುದೇ ಒಂದು ಗಿಡ ಅಥವಾ ಮರದ ಪ್ರಾಥಮಿಕ ಪರಿಚಯ ಅದರ ಸ್ಥಳೀಯ ಹೆಸರಿನಿಂದ ಆಪ್ತವಾಗಿ ಶುರುವಾಗುತ್ತಿತ್ತು. ನಂತರ ಅದರ ವಿವಿಧ ಭಾಗಗಳನ್ನು ಗಮನಿಸುತ್ತಾ ಅದರ ಹಣ್ಣು ಕಾಯಿಗಳ ರುಚಿಯನ್ನೂ ನೋಡುತ್ತಿದ್ದೆವು (ಮುಂದೆ ಅಮೇರಿಕಾದಲ್ಲಿ ನಮ್ಮ ಸಸ್ಯಶಾಸ್ತ್ರ ತರಗತಿಯ ಅವಿಭಾಜ್ಯ ಅಂಗವಾಗಿ ಬೇರೆ ಬೇರೆ ಜಾತಿಯ ಸಸ್ಯಗಳನ್ನು ಹೀಗೆ ರುಚಿ ನೋಡಿದ್ದೇನೆ. ಆದರೆ ಅಮೇರಿಕಾದ ಈ ತರಗತಿಗಳಲ್ಲಿ ಚಾಕೊಲೇಟ್ ಮೆದ್ದು, ಕೋಕ್ ಕುಡಿಯುವ ಪರಂಪರೆಯೂ ಉಂಟು) ಮಾವು ಮತ್ತು ಜುಜುಬೆ ಹಣ್ಣುಗಳನ್ನು ತಿಂದು ಇವುಗಳಲ್ಲಿರುವ ಸಾಮ್ಯತೆಗಳನ್ನು ಕುರಿತು ಚರ್ಚಿಸಿದ್ದೇವೆ. 'ಡ್ರುಪ್   ಎಂಬ ನಡುವೆ ಗಟ್ಟಿ ಓಟೆಯಿರುವ ಮೃದುವಾದ ಹಣ್ಣಿನ ಗುಣಲಕ್ಷಣಗಳನ್ನು ಹೀಗೆ ಅರಿತೆವು. ಆ ತೋಟಗಳಲ್ಲಿನ ನಮ್ಮ ನಿತ್ಯ ತಿರುಗಾಟವು ಸಸ್ಯಶಾಸ್ತ್ರದ ಬಹುಸೂಕ್ಷ್ಮ ಪದರಗಳನ್ನು ನಮಗೆ ಅರ್ಥೈಸಿದೆ. ಸಸ್ಯಶಾಸ್ತ್ರದ ಬಹುಕ್ಲಿಷ್ಟ ಸಮೀಕರಣಗಳು, ಪ್ರಮೇಯಗಳು ತಮ್ಮ ನೈಜ- ಉಜ್ವಲ ರೂಪದಲ್ಲಿ ನಮ್ಮ ಮುಂದೆ ಹರಡಿಕೊಂಡಿದೆ. ನಮ್ಮ ಶಿಕ್ಷಕರು ಇವೆಲ್ಲವನ್ನೂ ಮುಟ್ಟಿ ರುಚಿನೋಡಿ ಆಮೂಲಾಗ್ರವಾಗಿ ಅರಿಯುವುದನ್ನು ಪ್ರೋತ್ಸಾಹಿಸಿದ್ದಾರೆ. ಹೀಗಾಗಿ ಸಸ್ಯಶಾಸ್ತ್ರಿಯ ಕ್ಲಿಷ್ಟ ಶಬ್ದಗಳು ನಮ್ಮನ್ನೆಂದೂ ಸುಸ್ತು ಮಾಡಿಲ್ಲ. ಕಾರಣ ಸರಳ 'ಪಾಮೇಟ್   , 'ಡೈವರ್ಜೆಂಟ್   ,'ರೆಟಿಕ್ಯುಲೇಟ್   - ಈ ಎಲ್ಲಾ ಪದಗಳು ವಿವರಿಸಲೆತ್ನಿಸುವ 'ಪಪ್ಪಾಯ ಎಂಬ ಗಿಡವೇ ನನ್ನ ಮುಂದಿದೆ.

ಏಳನೇಯ ತರಗತಿಯ ಪರೀಕ್ಷೆಗಾಗಿ ನಮ್ಮ ಶಿಕ್ಷಕರು ವಿಜ್ಞಾನದ ಒಂದು ಪ್ರಾಯೋಗಿಕ ಪುಸ್ತಕ ತಯಾರಿಸಲು ಸೂಚಿಸಿದ್ದರು. ಇದಕ್ಕೆ ಸಾಮಾಗ್ರಿಗಳನ್ನು ನಾವು ನಮ್ಮ ಸುತ್ತಮುತ್ತಲ ತೋಟ,ಹೊಲ,ಗದ್ದೆಗಳಿಂದ ಸಂಗ್ರಹಿಸಿದ್ದೆವು. ಈಗ ೨೫ ವರ್ಷಗಳ ನಂತರವೂ'ಪಾಮೇಟ್ , ಡೈವರ್ಜೆಂಟ್   ,'ರೆಟಿಕ್ಯುಲೇಟ್   ಎಲೆಗಳನ್ನು ಹೊಂದಿರುವ ಸಸ್ಯಗಳಿರುವ ಆ ಒಂದೊಂದು ಜಾಗಗಳೂ ನಿಖರವಾಗಿ ನೆನಪಿದೆ. ಈಗಲು ಆ ಪಪ್ಪಾಯ ಗಿಡಗಳು ನನ್ನ ಕಣ್ಣ ಮುಂದೆ ನಿಂತಂತೆ ಭಾಸವಾಗುತ್ತಿದೆ. ಇದರ ಪರಿಣಾಮವೆಂದರೆ ಕಾಲೇಜಿನ ದಿನಗಳಲ್ಲಿ ನನಗೆ ಸಸ್ಯಶಾಸ್ತ್ರ ಕಲಿಯಲು ಸ್ವಲ್ಪವೂ ಕಷ್ಟವಾಗಲಿಲ್ಲ. ಪದವಿಯ ಕಡೆಯ ವರ್ಷದ ಪರೀಕ್ಷೆಯಲ್ಲಿ ಸಸ್ಯಶಾಸ್ತ್ರದಲ್ಲಿ ನಾನು ಕಾಲೇಜಿಗೆ ಮೊದಲಿಗನಾದೆ. ನನ್ನ ಪ್ರೊಫೆಸರ್ ನನ್ನನ್ನು ಹೊಗಳಿದಾಗ "ಸರ್ ನಾನು ಬಹಳ ಹಿಂದೆಯೇ ಸೇವಾಗ್ರಾಮದ ಶಾಲೆಯಲ್ಲೇ ಸಸ್ಯಶಾಸ್ತ್ರವನ್ನು ಕಲಿತಿದ್ದೇನೆ, ಈ ಕಾಲೇಜಿನಲ್ಲಲ್ಲ", ಎಂದು ಮೌನವಾಗಿ ಹೇಳಿಕೊಂಡೆ.

<u>ನಿಜ ಜೀವನದಲ್ಲಿ ಗಣಿತ</u>

ಇಲ್ಲಿ ಎರಡು ನಲ್ಲಿಗಳಿವೆ.'ಒಂದು ನಲ್ಲಿ ತೊಟ್ಟಿಗೆ ನೀರನ್ನು ತುಂಬಿಸುತ್ತದೆ. ಇನ್ನೊಂದು ನಲ್ಲಿ ನೀರನ್ನು ಹೊರಕ್ಕೆ ಹರಿಸುತ್ತಿದೆ. ಹಾಗಾದರೆ ಈ ತೊಟ್ಟಿಯನ್ನು ನೀರಿನಿಂದ ತುಂಬಲು ಬೇಕಾದ ಸಮಯವೆಷ್ಟು ? ನಮ್ಮ ಗಣಿತದ ಪುಸ್ತಕದಲ್ಲಿ ಈ ರೀತಿ ಅರೆಬೆಂದ ಪ್ರಶ್ನೆಗಳೆ ಕಿಕ್ಕಿರಿದು ತುಂಬಿವೆ. ಈಗಿನ ಮುಖ್ಯ ಪ್ರಶ್ನೆ ಏನೆಂದರೆ , ಈ ರೀತಿಯ ಗಣಿತಕ್ಕೂ ನಮ್ಮ ದೈನಂದಿನ ಜೀವನಕ್ಕೂ ಏನಾದರೂ ಸಂಬಂಧವಿದೆಯೆ? ಬುದ್ಧಿಯಿರುವ ಯಾವುದೇ ವ್ಯಕ್ತಿ ನೀರು ಹರಿದು ಹೋಗುವ ಆ ನಲ್ಲಿಯನ್ನು ನಿಲ್ಲಿಸಿ ಈ ಸಮಸ್ಯೆಯಿಂದ ಮುಕ್ತಿ ಹೊಂದ ಬಹುದಲ್ಲವೇ. ನಾನು ದ್ರವ್ಯರಾಶಿಯ ತತ್ವವನ್ನು ಹೇಗೆ ಅರಿತೆನೆಂದು ಒಂದು ಉದಾಹರಣೆಯ ಮೂಲಕ ಹೇಳುತ್ತೇನೆ. ದಿನದ ಮೂರು ಗಂಟೆ ನಾವು ಶ್ರಮದಾನ ಮಾಡುವುದು ನಮ್ಮ ಶಾಲೆಯ ಸಮಗ್ರ ಕಡ್ಡಾಯ ಭಾಗವಾಗಿತ್ತು. ಗಾಂಧೀಜಿಯವರ 'ಊಟಕ್ಕಾಗಿ ಶ್ರಮದಾನ ಎಂಬ ತತ್ವದ ಪ್ರಕಾರ ನಮ್ಮ ಊಟವನ್ನು ನಾವೇ ಬೆಳೆದುಕೊಳ್ಳಬೇಕು. ಸಾಮಾಜಿಕವಾದ ಈ ಕೆಲಸ ಕಾರ್ಯಗಳಲ್ಲಿ ತೊಡಗಿಕೊಳ್ಳುವ ಮೂಲಕ ಜೀವನಾವಶ್ಯಕ ಕರಕುಶಲತೆಗಳನ್ನು ವಿದ್ಯಾರ್ಥಿಗಳು ಕಲಿಯಬೇಕೆಂಬುದು 'ವಿನೋಬಾ ಭಾವೆ ಯವರ ಆದರ್ಶವೂ ಆಗಿತ್ತು. ಇದರ ಅಂಗವಾಗಿ ದನದ ಕೊಟ್ಟಿಗೆಯಲ್ಲಿ ಎರಡು ದಿನ ನಾನು ಸೇವೆ ಸಲ್ಲಿಸಬೇಕಿತ್ತು. ಒಂದು ಹೊಸ ಕೊಟ್ಟಿಗೆಯನ್ನು ಕಟ್ಟುವ ವೇಳೆ ದಿನನಿತ್ಯ ಎದುರಾಗುವ ಹಲವು ಸಮಸ್ಯೆಗಳನ್ನು ಬಗೆಹರಿಸಲು ಗುರುಗಳು ನನಗೆ ಹೇಳಿದರು. ಒಂದು ದನವು ದಿನಕ್ಕೆ ಎಷ್ಟು ನೀರು ಕುಡಿಯುತ್ತದೆ? ಒಟ್ಟು ದನಗಳ ಸಂಖ್ಯೆಗೆ ಸಾಕಾಗುವಷ್ಟು ನೀರಿನ ಪ್ರಮಾಣ ಎಷ್ಟು? ಇವುಗಳನ್ನು ಲೆಕ್ಕಹಾಕಿ ಅಷ್ಟು ನೀರು ಹಿಡಿಯುವ ದೊಡ್ಡ ತೊಟ್ಟಿಯನ್ನು ಕಟ್ಟಬೇಕಿತ್ತು. ಹಾಗೆ ಕಟ್ಟುವ ತೊಟ್ಟಿಗೆ ಒಟ್ಟು ಎಷ್ಟು ಇಟ್ಟಿಗೆಗಳು ಬೇಕೆಂದು ಕಂಡುಕೊಂಡು ಅಷ್ಟನ್ನು ಕೊಳ್ಳಬೇಕಿತ್ತು. ಸುಮಾರು ಒಂದು ವಾರ ನಾನು ಈ ಗಣಿತದ ಸಮಸ್ಯೆಯನ್ನೇ ಮೆಲಕು ಹಾಕುತ್ತಿದ್ದೆ. ಬೇರೆ ಬೇರೆ ಅಳತೆಯ ಸುಮಾರು ನೀರಿನ ತೊಟ್ಟಿಗಳೇನೋ ಇದ್ದವು. ಆದರೆ ಅವುಗಳ ದ್ರವ್ಯರಾಶಿ ಅಳೆಯುವುದು ಹೇಗೆ? ಅದರ ಹೊರಮೈ ವಿಸ್ತೀರ್ಣಕ್ಕೂ ಅದು ಹಿಡಿದಿಡುವ ನೀರಿನ ಪ್ರಮಾಣಕ್ಕೂ ಏನು ಸಂಬಂಧ? ಇತ್ಯಾದಿ. ಮುಂದೆ ನಾನು ಆ ತೊಟ್ಟಿಯನ್ನು ಕಟ್ಟಿದೆ ಮತ್ತು ಗಣಿತದ ಉಪಯೋಗವನ್ನು ನಿಜ ಜೀವನದಲ್ಲಿ ಅನುಭವಿಸಿ ತಿಳಿದೆ.

ಅಡುಗೆಯ ಮೂಲಕ ಕಲಿಕೆ

ಇಲ್ಲಿ ನಾನು ಸಾಮಾಜಿಕ ಕಾರ್ಯದ ಮೂಲಕ ವಿಜ್ಞಾನವನ್ನು ಕಲಿಯುವ ಒಳ್ಳೇ ಉದಾಹರಣೆಯನ್ನು ನೀಡುತ್ತೇನೆ. ನಮ್ಮ ಶಾಲೆಯಲ್ಲಿ ನಾವು ಸರದಿಯ ಮೇಲೆ ಅಡುಗೆಯ ಕೆಲಸ ಮಾಡುತ್ತಿದ್ದೆವು. ಶಾಲೆಯ ಊಟದ ಮನೆಯಲ್ಲಿ ನಿತ್ಯ ನೂರು ಜನರಾದರೂ ಊಟ ಮಾಡುತ್ತಿದ್ದರು. ಸರದಿಯ ಪ್ರಕಾರ ೮ ಜನರ ಗುಂಪು ಅಡುಗೆಯನ್ನು ಮಾಡಬೇಕಿತ್ತು. ಒಬ್ಬ ವ್ಯಕ್ತಿಗೆ ತಗಲುವ ಊಟದ ಖರ್ಚನ್ನು ಇತಿಂಷ್ಟೆಂದು ಮೊದಲೇ ನಿಗದಿಪಡಿಸಲಾಗಿತ್ತು. ಊಟವು ಪೌಷ್ಠಿಕವಾಗಿಯೂ, ರುಚಿಯಾಗಿಯೂ ಮತ್ತು ಖರ್ಚಿನ ಮಿತಿಯೊಳಗೂ ಇರಬೇಕಿತ್ತು. ಈ ಮೂರರಲ್ಲಿ ಸಮತೋಲನ ಸಾಧಿಸುವುದು ಬಹಳ ಕಷ್ಟ. ಆಲೂಗೆಡ್ಡೆಯ ಬೆಲೆ ಕಮ್ಮಿ ಇದ್ದರೂ ಅವುಗಳಲ್ಲಿ ಬರೀ ಪಿಷ್ಠವಿರುವುದರಿಂದ ಪೌಷ್ಠಿಕವೆಂದು ಪರಿಗಣಿಸಲಾಗದು. ಹಾಗೊಂದು ವೇಳೆ ಭಾರತೀಯ ವೈದ್ಯಕೀಯ ಸಂಸ್ಥೆ ನಿಗಧಿಪಡಿಸಿದಷ್ಟು ಎಣ್ಣೆಯನ್ನು ನಾವೇನಾದರೂ ತಲಾ ಇಷ್ಟೆಂದು ಲೆಕ್ಕ ಹಾಕಿ ಅಡುಗೆಯಲ್ಲಿ ಬಳಸಿದರೆ ನಮ್ಮ ತಲಾ ಊಟದ ಖರ್ಚಿನ ಹಣ ಇಲ್ಲಿಗೇ ಮುಗಿದು ಬಿಡುತ್ತಿತ್ತು. ಒಬ್ಬ ಜಾಣ ಗೃಹಿಣಿಗಿರುವ ಅನುಭವ ನಮಗಿಲ್ಲದ್ದರಿಂದ ನಾವು ಹಣದ ಮೌಲ್ಯ ಮತ್ತು ಆಹಾರದ ಪೌಷ್ಠಿಕತೆಯ ನಡುವೆ ಸಿಕ್ಕಿ ಸಮತೂಕ ಸಾಧಿಸಲು ಹೆಣಗುತ್ತಿದ್ದೆವು. ಬಹಳಷ್ಟು ಸಾರಿ ನಮ್ಮ ಆಹಾರ ಯೋಜನೆ ಮತ್ತು ನಾವು ತಯಾರಿಸಿದ ಖಾದ್ಯಗಳು ವ್ಯರ್ಥವಾಗಿ ಹೋಗುತ್ತಿದ್ದವು.

ಹಲವು ಸಾರಿ ಸಮಯಕ್ಕೆ ಸರಿಯಾಗಿ ಅಡುಗೆ ಮಾಡಿ ಬಡಿಸುವುದೇ ಕಷ್ಟ ಸಾಧ್ಯವಾಗಿತ್ತು. ನಾವು ಬೇಳೆ ಬೇಯುವ ಸಮಯವನ್ನು ತಪ್ಪಾಗಿ ಅಂದಾಜು ಮಾಡಿ ಮತ್ತೆ ಮತ್ತೆ ತೊಂದರೆಗೆ ಸಿಲುಕುತ್ತಿದ್ದೆವು. ರಾತ್ರಿ. ಬೆಟ್ಟದೆತ್ತರದ ರಾಶಿರಾಶಿ ಪಾತ್ರೆಗಳನ್ನು ತೊಳೆದಿಡುವಾಗಲಂತೂ ನಮ್ಮ ಸ್ಥಿತಿ ಯುದ್ಧದಲ್ಲಿ ಗಾಯಗೊಂಡ ಸೈನಿಕರಂತಿರುತ್ತಿತ್ತು. ಅದರ ಮೇಲೆ ನಾಳಿನ ಅಡುಗೆಯ ಯೋಜನೆ ಸೇರಿ ನಮ್ಮ ಧೃತಿಗೆಡಿಸುತ್ತಿತ್ತು. ಆದರೆ ಈ ಪ್ರಕ್ರಿಯೆಯಲ್ಲಿ ನಾವು ಮೂರು ಬಹುಮುಖ್ಯ ವಿಷಯಗಳನ್ನು ಅರಿತೆವು. ಸಂತುಲಿತ ಪೌಷ್ಠಿಕ ಆಹಾರದ ಮಹತ್ವ, ಆಯವ್ಯಯ ಅಡುಗೆ ಮಾಡುವ ಕಲೆಗಾರಿಕೆಗೆ, ಕೊತ್ತಂಬರಿ ಸೊಪ್ಪಿನಲ್ಲಿ ೧೧,೦೦೦ ವಿಟಮಿನ್ ಎ ಘಟಕಗಳಿರುತ್ತವೆ ಎಂಬುದು ನನಗೆ ಈಗಲೂ ನೆನಪಿದೆ. ಈ ಸಾಮುದಾಯಿಕ ಅಡುಗೆಮನೆಯಲ್ಲಿ ನಾನು ಕೆಲಸ ಮಾಡಿದ ಕೆಲವೇ ದಿನಗಳಲ್ಲಿ ಬಹುಮೂಲ್ಯವಾದ ಜೀವನ ಪಾಠಗಳನ್ನು ಕಲಿತೆ. ವಿಪರ್ಯಾಸವೆಂದರೆ ನಾನು ವೈದ್ಯಕೀಯ ಕಾಲೇಜಿನಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಈ ರೀತಿಯ ಒಂದೇ ಒಂದು ಪಾಠವೂ ಕಲಿಯಲಿಕ್ಕಿರಲಿಲ್ಲ.

ವ್ಯವಸಾಯದಲ್ಲಿ ಪ್ರಯೋಗಗಳು

ನಮ್ಮ ಶಾಲೆಯ ಪ್ರತೀ ಮಗುವಿಗೂ ಒಂದು ತುಂಡು ನೆಲವನ್ನು ತರಕಾರಿ ಬೆಳೆಯಲು ನೀಡಲಾಗುತ್ತಿತ್ತು. ಈ ನೆಲವನ್ನು ನಾವೇ ಉತ್ತಿ ಬಿತ್ತಿ ಕಳೆ ತಗೆದು ನೀರು ಕೊಟ್ಟು ಬೆಳೆ ತೆಗೆಯಬೇಕಿತ್ತು. ಹೀಗಾಗಿ ತಮ್ಮ ತಮ್ಮ ಬೆಳೆಗೆ ನೀರು ಕೊಡಲು ಅಲ್ಲಿದ್ದ ಬಾವಿಯ ಮುಂದೆ ವಿದ್ಯಾರ್ಥಿಗಳ ದೊಡ್ಡ ಸಾಲು ಯಾವಾಗಲೂ ಕಾಣುತ್ತಿತ್ತು. ಇದರಿಂದ ಸುಮಾರು ವಿದ್ಯಾರ್ಥಿಗಳು ರಾತ್ರಿ ಹೋಗಿ ತಮ್ಮ ಬೆಳೆಗಳಿಗೆ ನೀರು ಕಟ್ಟಬೇಕಿತ್ತು. ಆ ಸರಿ ಹೊತ್ತಿನಲ್ಲಿ ನರಿಗಳ ದೊಡ್ಡ ಊಳಿನ ಧ್ವನಿ ಮಕ್ಕಳನ್ನು ಹೆದರಿಸುತ್ತಿತ್ತು. ಆದರೂ ವಿದ್ಯಾರ್ಥಿಗಳು ಇದ್ದಬದ್ದ ಧೈರ್ಯವನ್ನೆಲ್ಲಾ ಒಗ್ಗೂಡಿಸಿಕೊಂಡು ಹೋಗಿ ನೀರು ಕಟ್ಟಿ ಬರುತ್ತಿದ್ದರು. ನಾವೇ ಸ್ವತಃ ಬೆಳೆದ ಹಣ್ಣು ತರಕಾರಿಗಳಿಂದಲೇ ನಾವು ಕೃಷಿ ವಿಜ್ಞಾನವನ್ನು ಕಲಿತೆವು. ಯಾವುದೇ ಗೊಬ್ಬರವನ್ನು ಬಳಸುವ ಮೊದಲು ಅದರ ರಾಸಾಯನಿಕ ಸಂಯೋಜನೆಯನ್ನು/ಘಟಕಗಳನ್ನು, ಅವರ ಪ್ರಮಾಣವನ್ನು ಅರಿಯ ಬೇಕಿತ್ತು. ಹಾಗಾಗಿ ಸುತ್ತಮುತ್ತಲಿನ ರೈತರ ಜೊತೆ ನಾವು ಈ ವಿಷಯದ ಬಗ್ಗೆ ಆಗಾಗ್ಗೆ ದೀರ್ಘ ಸಂವಾದಗಳನ್ನು ನಡೆಸುತ್ತಿದ್ದೆವು. ಇವರಲ್ಲಿ ಮುಕ್ತೇಶ್ವರ್ ಭಯ್ಯಾ ಭತ್ತ ಬೆಳೆಯುವ ಸುಧಾರಿತ ವಿಧಾನವನ್ನು ಜಪಾನಿನಲ್ಲಿದ್ದು ಕಲಿತು ಬಂದಿದ್ದರು. ಪ್ರೇಮ್ ಹವೇಲಿಯವರ ತೋಟವಂತೂ ಕಲ್ಲೆಸೆಯವಷ್ಟು ಹತ್ತಿರ ಇತ್ತು. ಇವರು ಮುಂದುವರೆದ ಸುಧಾರಿತ ಕೃಷಿ ಪದ್ಧತಿಯನ್ನು ಇಸ್ರೇಲಿನಲ್ಲಿದ್ದು ಕಲಿತು ಬಂದಿದ್ದರು. ಶ್ರೀ ಅನ್ನಾಭಾಯಿ ಸಹಸ್ರ ಬುಧ್ಧೆಯವರಂತೂ ಆಗಾಗ ನಮ್ಮ ಕೃಷಿ ಕ್ಷೇತ್ರಕ್ಕೆ ಬಂದು ವ್ಯವಸಾಯ ಹೊಸ ಹೊಸ ತಂತ್ರಗಾರಿಕೆ ಮತ್ತು ಕೃಷಿಯ ಖರ್ಚುವೆಚ್ಚಗಳ ಬಗ್ಗೆ ನಮ್ಮೆಲ್ಲರ ಕಣ್ತೆರೆಸುತ್ತಿದ್ದರು. ಇಂಥ ಒಂದು ಅದ್ಭುತ ವಾತಾವರಣದಲ್ಲಿ ನಾವು ವ್ಯವಸಾಯ ಮಾಡುವುದನ್ನು ಕಲಿತೆವು. ವಿದ್ಯಾರ್ಥಿಗಳ ನಡುವೆ ಬೆಳೆತೆಗೆಯುವ ವಿಚಾರದಲ್ಲಿ ಆರೋಗ್ಯಕರ ಸ್ಪರ್ಧೆ ಇತ್ತು. ನಮಗೆ ಸಿಕ್ಕ ತುಂಡು ಭೂಮಿಯಲ್ಲೇ ಬೇರೆಲ್ಲರಿಗಿಂತ ಹೆಚ್ಚು ಬೆಳೆ ತೆಗೆಯಲು ಪೈಪೋಟಿ ನಡೆಯುತ್ತಿತ್ತು. ಬೆಳೆಯ ಪ್ರಮಾಣ ಹೆಚ್ಚಿಸಲು ನಾವು ಸಿಕ್ಕಾಪಟ್ಟೆ ಗೊಬ್ಬರವನ್ನು ಭೂಮಿಗೆ ಸೇರಿಸುತ್ತಿದ್ದೆವು. ಆ ಸಿಕ್ಕಾಪಟ್ಟೆ ಗೊಬ್ಬರವೆಂದರೆ ಬಕೀಟುಗಟ್ಟಲೆ ದನದ ಗಂಜಲ. ಈ ಗೊಬ್ಬರ ನೀಡುವ ಹೊಸ ತಂತ್ರವನ್ನು ಅಳವಡಿಸಿಕೊಂಡು ನಾನು ಬೆಳೆದ ಬದನೆಕಾಯಿಯೊಂದು ೧.೭೫ ಕೆ.ಜಿ ತೂಗಿತ್ತು. ಇದನ್ನು ವಾರ್ಧಾದ ಮಾರುಕಟ್ಟೆಯಲ್ಲಿ ಮಾರುವುದಕ್ಕಿಟ್ಟಾಗ ಇದೊಂದು ವಿಚಿತ್ರ ರೋಗದ ಬದನೆ ಎಂದುಕೊಂಡು ಯಾರೂ ಇದನ್ನು ಮುಟ್ಟಿಕೂಡ ನೋಡಲಿಲ್ಲ.

ಜೀವನದ ಶಿಕ್ಷಣ

ನಮ್ಮ 'ನಯೀ ತಾಲೀಮ್ ಶಾಲೆಯ ಮೇಲಿನ ಆರೋಪವೆಂದರೆ ಇಲ್ಲಿ ವಿದ್ಯಾರ್ಥಿಗಳ ಶ್ರಮದಾನಕ್ಕೆ ನೀಡಿದ್ದ ಪ್ರಾಶಸ್ತ್ಯ. ಈ ದೈಹಿಕ ಶ್ರಮವು ಓದಲು ಬಹು ದೊಡ್ಡ ಅಡ್ಡಿ ಎಂದೇ ಪರಿಗಣಿಸಲಾಗಿತ್ತು. ಯಾವಾಗ ಇಂತದ್ದೇ ಪ್ರಾಥಮಿಕ ಶಿಕ್ಷಣ ನೀತಿಯನ್ನು ಮದ್ರಾಸ್ ಪ್ರಾಂತ್ಯದಲ್ಲಿ ಜಾರಿಗೊಳಿಸಲಾಯಿತೋ ಅಲ್ಲಿನ ಜನ ಹೀಗೆಂದರು- ''ನಮ್ಮ ಮಕ್ಕಳ ಸಮಯವೆಲ್ಲಾ ದೈಹಿಕ ಶ್ರಮದಲ್ಲೇ ಕಳೆದು ಹೋಗುತ್ತದೆ. ಅವರು ಓದಿನಲ್ಲಿ ಹಿಂದುಳಿದಿದ್ದಾರೆ ಎಂಬ ಗುರುತರ ಆರೋಪದ ಮೇಲೆ ಆಗಿನ ಮದ್ರಾಸ್ ಪ್ರಾಂತ್ಯದ ಮುಖ್ಯಮಂತ್ರಿಗಳಾದ ಶ್ರೀ ರಾಜಾಜಿಯವರು ರಾಜೀನಾಮೆ ನೀಡಬೇಕಾಯಿತು. ಆದರೆ ಸತ್ಯ ಏನು? ಯಾವ ಜನರು ತಮ್ಮ ಮಕ್ಕಳ ಮನಸ್ಸನ್ನು ಒಂದಕ್ಕೊಂದು ಸಂಬಂಧಪಡದ ಭಿನ್ನ ಭಿನ್ನ ಮಾಹಿತಿಗಳಿಂದ ತುಂಬಿಸಿ ವಾರ್ಷಿಕ ಪರೀಕ್ಷೆಗಳ ಉತ್ತರ ಪತ್ರಿಕೆಯಲ್ಲಿ ಅವನ್ನು ಕಕ್ಕಿ ತೇರ್ಗಡೆಯಾಗಬೇಕೆಂದು ಬಯಸಿದ್ದರೋ ಅಂಥವರಿಗಷ್ಟೇ ಈ ಆರೋಪ ಸತ್ಯವೆಂದು ಕಂಡಿತ್ತು. ಈ ಗುಂಪಿನ ಜನರ ಪ್ರಕಾರ, ಯಾವುದೇ ಮಗುವಿಗೆ ಸಲ್ಫುರಿಕ್ ಆಮ್ಲ ತಯಾರಿಸುವ ನಾಲ್ಕು ಬೇರೆ ಬೇರೆ ವಿಧಾನಗಳು ಗೊತ್ತಿಲ್ಲದಿದ್ದಲ್ಲಿ ಆ ಮಗುವಿನ ಜ್ಞಾನದ ಮಟ್ಟ ಬಹಳ ಕಮ್ಮಿ ಎಂದೇ ಅರ್ಥ. ಈ ರೀತಿಯ ವಿಷಯಗಳು ತಿಳಿದಿದೆ ಅಥವಾ ಇಲ್ಲ ಎಂಬುದು ಒಂಭತ್ತನೇ ತರಗತಿಯ ಒಂದು ಮಗುವಿಗೆ ಯಾವ ರೀತಿ ನೆರವಾಗಬಲ್ಲುದು? ಏಕೆಂದರೆ ಇವು ಆ ಮಗುವಿನ ನಿಜ ಜೀವನಕ್ಕೆ ಪೂರ್ತಿ ಹೊರತಾದ ವಿಷಯಗಳಾಗಿವೆ. ಆದರೆ 'ನಯೀ ತಾಲೀಮ್ ನ ಯಾವುದೇ ಮಗು ನಿಜ ಜೀವನದ ಸಂಪರ್ಕಕ್ಕೆ ಬರುವ ಎಲ್ಲಾ ವಿಜ್ಞಾನ ವಿಭಾಗಗಳಲ್ಲಿ ಬೇರೆ ಶಾಲೆಯ ಮಕ್ಕಳಿಗಿಂತ ಸದಾ ಮುಂದು. ಇದು ಸಹಜ. ಆದರೆ ಇತಿಹಾಸ, ಭೂಗೋಳ, ರಾಜಕೀಯಶಾಸ್ತ್ರ ಮತ್ತು ಸಾಮಾನ್ಯ ಜ್ಞಾನಗಳಲ್ಲೂ ಇವರು ಬೇರೆ ಮಕ್ಕಳನ್ನು ಮೀರಿಸಬಲ್ಲರು. ಇದು ಹೇಗೆ?

ಭೂಗೋಳವನ್ನು ನಾನು ಪಠ್ಯ ಪುಸ್ತಕಗಳ ಮೂಲಕ ಕಲಿತದ್ದಲ್ಲ. ಸೇವಾ ಗ್ರಾಮಕ್ಕೆ ವಿವಿಧ ದೇಶದಿಂದ ಅತಿಥಿಗಳು ಬರುತ್ತಿದ್ದರು. ಅವರು ತಂತಮ್ಮ ದೇಶದ ಬಗ್ಗೆ ಹೇಳುತ್ತಿದ್ದ ಕಥೆಗಳ ಮೂಲಕವೇ ನಾನು ಬಹಳಷ್ಟು ಕಲಿತೆ. ಅಂಚೆ ಚೀಟಿ ಸಂಗ್ರಹ ಮಾಡುವ ನನ್ನ ಹವ್ಯಾಸದ ಮೂಲಕವೂ ನನಗೆ ಬೇರೆಲ್ಲಾ ದೇಶಗಳ ಬಗ್ಗೆ ಬಹಳ ಆಸಕ್ತಿದಾಯಕ ಮಾಹಿತಿಗಳು ಸಿಕ್ಕಿದೆ. ವಿವಿಧ ದೇಶಗಳ ಬಗೆಗಿನ ಪ್ರವಾಸೀ ಲೇಖನಗಳ ಮೂಲಕವೂ ನಾನು ಆ ದೇಶಗಳ ಹೃದಯದ ಮಿಡಿತವನ್ನು ಅರಿಯುವ ಪ್ರಯತ್ನ ಮಾಡಿದ್ದೇನೆ. ನಾನು ಭೂಗೋಳ ಕಲಿತದ್ದು ಹೀಗೆ. ಒಂಭತ್ತನೇ ತರಗತಿಯಲ್ಲಿ ನಾನು ಶರತ್ಚಂದ್ರರ '' ಪಥೇರ್‌ದಾವಿ ಮತ್ತು ಜಾಮ್‌ಚಂದ್ ಮೇಘಾನಿಯವರ ಕಾದಂಬರಿ ''ಪ್ರಭು ಪದಾರೆ ಗಳನ್ನು ಓದಿದ್ದೆ. ಇಲ್ಲಿನ ಚಿತ್ರವತ್ತಾದ ವಿವರಣೆ ಮುಂದೆ ನಾನು ಬರ್ಮಾ ಪ್ರವಾಸ ಮಾಡಲು ಪ್ರೇರಣೆಯಾಯಿತು. ನನ್ನ ಮಟ್ಟಿಗೆ ಭೂಗೋಳವೆಂದರೆ ಸದಾ ಜೀವಂತಿಕೆಯಿಂದ ತುಡಿಯುವ ವಿಷಯ. ಕೆಟ್ಟ ಬೋರು ಹೊಡೆಸುವ ಪಠ್ಯವಲ್ಲ.

ನಮ್ಮ ಶಿಕ್ಷಕರು ರಾಜ್ಯಶಾಸ್ತ್ರ ಮತ್ತು ಸಾಮಾನ್ಯ ಜ್ಞಾನವನ್ನು ಬೋಧಿಸಲು ಆಯ್ದುಕೊಂಡ ಮಾರ್ಗ ಬಹಳ ವಿಶಿಷ್ಟವಾಗಿತ್ತು. ಪ್ರತಿ ಸಂಜೆ ಆ ದಿನದ ಸಮಾಚಾರವನ್ನು ಪತ್ರಿಕೆಯಲ್ಲಿ ಅಚ್ಚಾದ ಆಸಕ್ತಿಕರ ಸಂಗತಿಗಳನ್ನು, ಮುಖ್ಯ ವಿಚಾರಗಳನ್ನು ಓದಿ ಹೇಳುತ್ತಿದ್ದರು. ಆ ಘಟನೆಗಳಿಗೆ ಕಾರಣೀಭೂತವಾದ ರಾಜಕೀಯ ಮತ್ತು ಐತಿಹಾಸಿಕ ಪರಿಸ್ಥಿತಿಗಳ ವಿಚಾರ-ವಿಶ್ಲೇಷಣಗಳನ್ನು ನಡೆಸುತ್ತಿದ್ದರು. ಆಗಿನ ಹೊಸ ಪ್ರಮುಖ ವಿದ್ಯಮಾನವೆಂದರೆ ಕ್ಯೂಬಾಗೆ ರಷಿಯಾ ಶಸ್ತ್ರಾಸ್ತ್ರಗಳನ್ನು ಕಳುಸಿಕೊಟ್ಟಿದ್ದರ ಬಗ್ಗೆ ಅಮೇರಿಕಾದ ತಕರಾರು. ಮುಂದೆ ಎರಡನೇ ಮಹಾ ಯುದ್ಧದಲ್ಲಿ ಇಡೀ ಪ್ರಪಂಚವೇ ಬಂಡವಾಳಶಾಹಿ ಮತ್ತು ಸಮಾಜವಾದಿ ಎಂಬ ಎರಡು ಹೋಳಾಯಿತು. ಅಮೇರಿಕಾ ಮತ್ತು ರಷಿಯಾಗಳ ನಡುವಿನ ಪೈಪೋಟಿಗಳ ಬಗ್ಗೆ, ಕ್ಯೂಬಾದ ಕ್ರಾಂತಿಯ ಪ್ರಾಮುಖ್ಯತೆಯನ್ನು ಕುರಿತು ನಮಗೆ ತಿಳಿಸಿ ಹೇಳಿದರು. ಸ್ವಿಟ್ಜರ್‌ಲ್ಯಾಂಡ್ ದೇಶವನ್ನು 'ಹೆಲ್‌ವೆಟಿಯಾ ಎಂದು ಏಕೆ ಕರೆಯುತ್ತಾರೆ ಎಂಬ ಪ್ರಶ್ನೆ ನನ್ನನ್ನು ಎಷ್ಟು

ಕಾಡಿತ್ತೆಂದರೆ ನಾನು ಇದಕ್ಕೆ ಉತ್ತರ ತಿಳಿಯಲು ಬಹಳಷ್ಟು ಪುಸ್ತಕಗಳನ್ನೇ ಓದಿದೆ. ಈ ಪ್ರಕ್ರಿಯೆಯಲ್ಲಿ ಆ ದೇಶದ ಬಗ್ಗೆ ಬಹಳ ತಿಳಿದುಕೊಂಡೆ.

ಹೊಸ ಮಾರ್ಗ

ನಾನೀಗಾಗಲೇ ಹೇಳಿದ ಹಾಗೆ ನಮ್ಮ ಶಾಲೆ ಕಲಿಕೆಯ ಸಾಧ್ಯತೆಗಳನ್ನು ವಿಸ್ತರಿಸಲು ಹೊಸ ಹೊಸ ಬೋಧನಾ ವಿಧಾನಗಳನ್ನು ಪ್ರಯೋಗಿಸುತ್ತಿತ್ತು. ಈ ನೂತನ ಪ್ರಯತ್ನಗಳ ಹಿನ್ನೆಲೆಯಲ್ಲಿ ಗಾಂಧೀಯವರ ಶಿಕ್ಷಣದ ಬಗೆಗಿನ ಪರಿಕಲ್ಪನೆ ಮತ್ತು ಟಾಗೂರರ ಕಲಾಪ್ರೇಮ ಅಡಕವಾಗಿದ್ದವು. ಉದಾಹರಣೆಗಳೆಂದರೆ, ಲಿಖಿತ ಪರೀಕ್ಷೆ ಮಾತ್ರವಲ್ಲದೆ ನಮ್ಮ ಕಲಿಕಾ ಸಾಮರ್ಥ್ಯವನ್ನು ಅಳೆಯಲು ನಮ್ಮ ಅಡುಗೆಯ ಕಲೆ, ನಾಟಕಗಳನ್ನು ರಚಿಸಿ ಅಭಿನಯಿಸುವುದು, ಭಾರೀ ಜನಸ್ತೋಮ ಸೇರಿದ ಸಭೆಗಳಲ್ಲಿ ಭಾಷಣ ಮಾಡುವುದು, ಲೇಖನಗಳನ್ನು ಬರೆಯುವುದು ಮುಂತಾದುವನ್ನು ಗಣಿಸಲಾಗುತ್ತಿತ್ತು. ಈ ಪ್ರಯೋಗಗಳ ಹೊಸತನ ಇದ್ದದ್ದು ನಮ್ಮ ಶಾಲಾ ಕೊಠಡಿಯೊಳಗೇ ಅದು ನೀಡುತ್ತಿದ್ದ ಆಯ್ಕೆಯ ಸ್ವಾತಂತ್ರ್ಯದಲ್ಲಿ.

ಎಲ್ಲ ತರಗತಿಗಳಲ್ಲೂ ಕೆಲವು ಬುದ್ಧಿವಂತ ಮಕ್ಕಳ ಜೊತೆ ಅಷ್ಟೇನೂ ಬುದ್ಧಿವಂತರಲ್ಲದವರೂ ಇರುತ್ತಾರೆ. ಮಕ್ಕಳು ತಮ್ಮ ತರಗತಿಯ ಪರೀಕ್ಷೆಗಳನ್ನು ಮಾತ್ರ ತೆಗೆದುಕೊಳ್ಳಬೇಕೆಂಬ ನಿಯಮವೇ ಇರಲಿಲ್ಲ. ಎಂದರೆ ಆ ವರ್ಷದ ಕಡೆಯ ಪರೀಕ್ಷೆಗಳಲ್ಲಿ ನಾನು ಏಳನೇ ತರಗತಿಯ ಇಂಗ್ಲಿಷ್, ಒಂಭತ್ತನೇ ತರಗತಿಯ ಗಣಿತ ಮತ್ತು ಹತ್ತನೇ ತರಗತಿಯ ಮರಾಠಿ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದಿತ್ತು. ಮೌಲ್ಯಾಧಾರಿತ ಶಿಕ್ಷಣವೇ ಇಲ್ಲಿನ ಆಧಾರ ಸ್ತಂಭವಾಗಿತ್ತು. ನಾವೂ ಈ ಮೌಲ್ಯಗಳನ್ನು ಅಂತರ್ಗತ ಮಾಡಿಕೊಳ್ಳುತ್ತಾ, ಹೋದೆವು. ಶ್ರಮಜೀವಿಗಳಿಗೆ ಗೌರವ, ಸ್ವಸಹಾಯ, ಸಮಾನತೆ ಮತ್ತು ಸಮಾಜದ ಒಳಿತಿಗಾಗಿ ಸಾಮೂಹಿಕ ದುಡಿಮೆ- ಇಂಥಾ ಮಾನವೀಯ ಮೌಲ್ಯಗಳಲ್ಲದೆ ದೇಶಭಕ್ತ- ಸಮಾಜೋದ್ಧಾರ ಚಳುವಳಿಗಳಲ್ಲೂ ನಮ್ಮ ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದರು. ಆಗ ಬಿಹಾರದಲ್ಲಿ ನಡೆಯುತ್ತಿದ್ದ ಭೂದಾನ ಚಳುವಳಿಯಲ್ಲಿ, ನಮ್ಮ ಪಾಲ್ಗೊಳ್ಳುವಿಕೆಯ ಸಲುವಾಗಿ ಕೆಲ ದಿನಗಳ ಮಟ್ಟಿಗೆ ಶಾಲೆಯನ್ನೇ ಮುಚ್ಚಲಾಗಿತ್ತು.

ನನ್ನ ಶಾಲೆಯ ಈ ಅನುಭವಗಳ ಬಗ್ಗೆ ಮಾತನಾಡಿದಾಗಲೆಲ್ಲಾ ಜನರು ಕೇಳುತ್ತಾರೆ. " ಈ ಶಾಲೆ ಇನ್ನೂ ನಡೆಯುತ್ತಿದೆಯೇ? ನಮ್ಮ ಮಕ್ಕಳನ್ನೂ ಈ ಶಾಲೆಗೆ ಸೇರಿಸಬಹುದೇ? ಹೀಗಾಗಿ ನನ್ನೀ ಶಾಲೆಯ ಬಗ್ಗೆ ನಾನು ಕಡೆಯ ಮಾಹಿತಿ ನೀಡಿ ಬಿಡುತ್ತೇನೆ..

ಗಾಂಧೀಜಿಯವರ ಗ್ರಾಮೀಣ ಕೈಗಾರಿಕಾ ಕೇಂದ್ರಿತ ಭಾರತದ ಪರಿಕಲ್ಪನೆ ನಮ್ಮ ಸರ್ಕಾರಕ್ಕೆ ಸರಿ ಕಾಣಲಿಲ್ಲ. ಬೃಹತ್ ಉದ್ದಿಮೆಗಳ ಎದುರು ಗುಡಿ ಕೈಗಾರಿಕೆಗಳು ದಯನೀಯವಾಗಿ ನೆಲಕಚ್ಚಿದವು. ನಮ್ಮ ಶಾಲೆಗೆ ಸರ್ಕಾರದ ಮಾನ್ಯತೆ ಇರಲಿಲ್ಲ. ಅದು ಮುಚ್ಚಿಹೋಯಿತು. ಸರ್ಕಾರದ ಮಾನ್ಯತೆ ಪಡೆಯದ ಶಾಲೆಗಳ ವಿದ್ಯಾರ್ಥಿಗಳ ಭವಿಷ್ಯ ಸದಾ ಡೋಲಾಯಮಾನ. ಹೀಗಾಗಿ ಪೋಷಕರು ತಮ್ಮ ಮಕ್ಕಳನ್ನು ಈ ಶಾಲೆಯಿಂದ ಬಿಡಿಸಿದರು. ಭೂದಾನ ಚಳುವಳಿಯಲ್ಲಿ ಭಾಗವಹಿಸಿದವರ ಮಕ್ಕಳೂ ಇಲ್ಲಿ ಓದುತ್ತಿದ್ದರು. ಆ ಮೇಲೆ ಅವರೂ ತಮ್ಮ ಮಕ್ಕಳನ್ನು ಈ ಶಾಲೆಯಿಂದ ಬಿಡಿಸಿ ಬಿಟ್ಟರು. ನಮ್ಮ ಸರ್ಕಾರಕ್ಕಾಗಲೀ- ಸಮಾಜಕ್ಕಾಗಲೀ ಈ ಶಾಲೆಯ ಮಹತ್ವ ಅರಿವಾಗಲೇ ಇಲ್ಲ. ಹೊರಗಿನ ನಿಷ್ಠುರ ಹಾಗೂ ಶುಷ್ಕ ಸಾಮಾಜಿಕ ವಾತಾವರಣಕ್ಕೆ ಈ ಶಾಲೆ ಬಲಿಯಾಯಿತು. ಕಡೆಗೆ ಭೂದಾನ ಚಳುವಳಿಯೂ ಹೀಗೇ ಅಂತ್ಯ ಕಂಡಿತು. ಸಮಾಜದಲ್ಲಿ ಆಳವಾಗಿ ಬೇರೂರಿರುವ ಸ್ವಾರ್ಥ ಮತ್ತು ಸ್ಪರ್ಧಾ ಮನೋಭಾವ ಈ ಶಾಲೆಯ ಶವಪೆಟ್ಟಿಗೆಯ ಕೊನೆಯ ಮೊಳೆಗಳು.

ನನ್ನ ಮಗನನ್ನು ಇಂತಹದೇ ಶಾಲೆಗೆ ಕಳಿಸಬೇಕೆಂದಿದ್ದೇನೆ. ಆದರೆ ಆ ಶಾಲೆ ಈಗ ಎಲ್ಲಿದೆ?

-ಮುಗಿಯಿತು-

ಟಿಪ್ಪಣಿ:- ಡಾ॥ಅಭಯ್ ಬಾಂಗ್‌ರವರು ಓದಿದ ಮಹಾರಾಷ್ಟ್ರದ, ವಾರ್ದಾದಲ್ಲಿರುವ 'ನಯೀ ತಾಲೀಮ್ ಶಾಲೆ ಕಳೆದ ೭ ವರ್ಷಗಳ ಹಿಂದೆ ಪುನರಾರಂಭಗೊಂಡಿದೆ. ಸುಷ್ಮಾತಾಯಿ ಎಂಬುವವರು ಈಗ ಅದರ ಸಂಯೋಜಕಿಯಾಗಿ ಚೆನ್ನಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸುಮಾರು ೨೦೦ ಮಕ್ಕಳು ಈಗ ಆ ಶಾಲೆಯಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ.